O.S. No.34/2020
CW. -2

**<u>ದಿನಾಂಕಃ 01-12-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.</u>**

***<u>ಪಾಟೀ ಸವಾಲುಃ ಎಸ್.ಕೆ.ಪಿ. ವಕೀಲರಿಂದ.</u>***

ವಾದಿಯು ಅಲಹಾಬಾದ್ ಬ್ಯಾಂಕಿನ ಗ್ರಾಹಕರು. 2020 ನೇ ಇಸವಿಯಲ್ಲಿ ಅಲಹಾಬಾದ್ ಬ್ಯಾಂಕು ಇಂಡಿಯನ್ ಬ್ಯಾಂಕಿನಲ್ಲಿ ವಿಲೀನವಾಗಿದೆ. ಅವರ ಖಾತೆ ಸಕ್ರಿಯವಾಗಿತ್ತು. ಇಂಡಿಯನ್ ಬ್ಯಾಂಕಿನಲ್ಲಿಯೂ ಅವರ ಖಾತೆ ಸಕ್ರಿಯವಾಗಿತ್ತು ಸಾಕ್ಷಿಯು ಖಾತೆಯನ್ನು ನೋಡಿ ಹೇಳುತ್ತೇನೆ ಎಂದು ಹೇಳಿ 2019 ರ ಖಾತೆ ವಹಿ ಮಾತ್ರ ಪ್ರಸ್ತುತ ಇದ್ದು ಉಳಿದದ್ದನ್ನು ಹೇಳಲಾಗದು ಎನ್ನುತ್ತಾರೆ. 2019 ರಲ್ಲಿ ಅವರು ವ್ಯವಹಾರ ಮಾಡಿದ್ದಾರೆ. ದಿನಾಂಕ 12-07-2019 ಕ್ಕೆ ವಾದಿಯ ನಮ್ಮ ಬ್ಯಾಂಕಿನ ಖಾತೆಗೆ ರೂ.50,000/- ಜಮ ಆಗಿದೆ. ದಿನಾಂಕ 12-07-2019 ರಲ್ಲಿ ರೂ.2,54,610/- ಒಟ್ಟು ಜಮೆ ಇರುತ್ತದೆ. ದಿನಾಂಕ 15-07-2019 ರಂದು ರೂ.2,53,000/- ಗಳು ಪ್ರತಿವಾದಿಗೆ ಕೊಟ್ಟ ಚೆಕ್ ಕಾರಣಕ್ಕೆ ಖರ್ಚುಹಾಕಲಾಗಿದೆ. ನಿಪಿ-1 ನಮ್ಮ ಗ್ರಾಹಕರಾದ ವಾದಿಯು ಪ್ರತಿವಾದಿಯ ಹೆಸರಿಗೆ ದಿನಾಂಕ 12-07-2019 ರಂದು ಕೊಟ್ಟಿದ್ದು ಅದು ಪ್ರತಿವಾದಿಯ ಯುನಿಯನ್ ಬ್ಯಾಂಕಿನ ಖಾತೆಯಿಂದ ನಮ್ಮ ಬ್ಯಾಂಕಿಗೆ ಸಲ್ಲಿಸ್ಪಟ್ಟು ಪ್ರತಿವಾದಿಗೆ ಪಾವತಿಸ್ಪಟ್ಟಿದೆ.

**ಮರುವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಖ್ತಲೇಖನೆ ಮೇರೆಗೆ ಬೆರಳಚ್ಚುಗಾರ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಿರುತ್ತಾರೆ ಮತ್ತು ಅದನ್ನು ಸಾಕ್ಷಿ ಮತ್ತು ಅವರ ಪರ ವಕೀಲರು ನೋಡಿ ತಿಳಿದುಕೊಂಡಿರುತ್ತಾರೆ.)

**ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು,**
**ರಾಯಚೂರು.**